

ವಿಸಿಟಿಂಗ್ ಕಾರ್ಡ್ ತೆಗೆದು ನಾಲ್ಕು ಬಾರಿ ಫೋನ್ ಮಾಡಿದ್ದಳು. ಆದರೆ ಆ ಕಡೆಯಿಂದ ನಾಟ್ ರೀಚಬಲ್ ಎಂಬ ಉತ್ತರ ಬರುತ್ತಿತ್ತು. ಮುಂಬಯಿಯ ಅವನ ಕಂಪನಿಯ ಬಳಿ ಹೋಗಿ ವಿಚಾರಿಸೋಣವೆಂದು ಯೋಚಿಸಿದವಳಿಗೇಕೋ ಅದು ಉಚಿತವೆನಿಸಲಿಲ್ಲ. ಮನದ ಮೂಲೆಯಲ್ಲೆಲ್ಲೋ ಒಂದು ರೀತಿಯ ಭಯ ಮತ್ತು ತುಡಿತ ಎರಕಹೊಯ್ದು ಕುಳಿತಂತ ಅನುಭವ. ಮೂವತ್ತನೆಯ ದಿನ ರಾತ್ರಿ ಮುಂಬಯಿಯಿಂದ ಎಂಟು ಗಂಟೆಗೆ ಹೊರಡುವ ವಿಮಾನಕ್ಕೆ ಆತ ಮಾಮೂಲಿ ನಗುವಿನೊಂದಿಗೆ ಪ್ರವೇಶಿಸಿದ್ದ. ಅವಳಲ್ಲಿ ನಿರಾಳ ಭಾವ ಮೂಡಿತ್ತು. ಆತನಲ್ಲಿ ಒಂದು ರೀತಿಯ ಫ್ರೆಶ್ನೆಸ್ ಕಂಡಿತ್ತು ಅವಳಿಗೆ. ಟೇಕಾಫ್ ಆಗಿ ಇಪ್ಪತ್ತು ನಿಮಿಷವಾಗಿತ್ತು. ಸ್ಮಿತಾ ಶರ್ವಾಣಿ ಕಾಕ್ಪಿಟ್ ಕಡೆಯಿಂದ ಹಿಂದಿನ ಕ್ಯಾಬಿನ್ ಕಡೆ ಹೋಗುತ್ತಿದ್ದವಳು ಸಿದ್ಧಾರ್ಥ ಕುಮಾರನ ಹತ್ತಿರ ನಿಂತು 'ಆರ್ ಯು? ಆಲ್ ರೈಟ್?' ಎಂದು ಪಿಸುಗುಟ್ಟಿದ್ದಳು. ವಿಮಾನದ ಮಂದ ಬೆಳಕಿನಲ್ಲಿ ಅವಳನ್ನು ಕಣ್ತುಂಬಿಕೊಂಡು 'ನನ್ನ ಕರುಳು ಈಗ ಸುಧಾರಿಸಿದೆ. ಕೆನಡ ಟೊರೆಂಟೊದ ಟೊರೆಂಟೊ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆಂದು ತುರ್ತಾಗಿ ಹೋಗ ಬೇಕಾಯಿತು. ನಿಮಗೆ ಗೊತ್ತಾ, ಆ ಆಸ್ಪತ್ರೆ ಪ್ರಪಂಚದ ದಿ ಬೆಸ್ಟ್ ಆಸ್ಪತ್ರೆಗಳಲ್ಲಿ ಮೂರನೆಯದು. ಜಸ್ಟ್ ಇಪ್ಪತ್ತೆರಡು ದಿನಗಳಲ್ಲಿ ನನ್ನ ಪ್ಯಾಂಕ್ರಿಯಾಸನ್ನು ಅದ್ಭುತವಾದ ರೀತಿಯಲ್ಲಿ ರಿಪೇರಿ ಮಾಡಿ ಶುಗರ್ ಲೆವೆಲ್ ಮುನ್ನೂರಕ್ಕೆ ಬರುವಂತೆ ಮಾಡಿದ್ದಾರೆ. ಪ್ಯಾಂಕ್ರಿಯಾಸಿನ ಇನ್ಸುಲಿನ್ ಉತ್ಪಾದಿಸುವ ಶಕ್ತಿಯನ್ನು ಹೆಚ್ಚಿಸಿ ಅದರ ಲೆವೆಲ್ಲನ್ನು ಬಹಳ ಕಾಲ ಸ್ಥಿರವಾಗಿರುವಂತೆ ಮಾಡುವ ಔಷಧಿಯನ್ನು ಆ ಆಸ್ಪತ್ರೆಯ ಡಾಕ್ಟರುಗಳ ಟೀಮ್ ಸಂಶೋಧನೆ ಮಾಡುವುದರಲ್ಲಿ ಯಶಸ್ವಿಯಾಗಿದೆ. ಲಿವರ್ ಹಿಂದೆ ಬಚ್ಚಿಟ್ಟುಕೊಂಡಿರುವ ಪ್ಯಾಂಕ್ರಿಯಾಸ್ ಅದೆಂಥ ಅಂಗ. ಜಗತ್ತಿನ ಅರ್ಧ ಮೆಡಿಕಲ್ ಮಾಫಿಯಾ ಈ ಅಂಗದ ಮೇಲೆ ಡಿಪೆಂಡ್ ಆಗಿದೆ! ಪ್ಯಾಂಕ್ರಿಯಾಸ್ ದುರ್ಬಲವಾಗುವುದರಿಂದ ದೇಹದ ಎಲ್ಲಾ ಅಂಗಾಂಗಗಳೂ ಊನಗೊಳ್ಳುವ ಅಪಾಯವಿದೆ. ಇಂಥ ದೊಡ್ಡ ಅಪಾಯದಿಂದ ಜಗತ್ತನ್ನು ಹೊರತರುವಂಥ ಅವರ ಔಷಧಿಯ ಪೇಟೆಂಟ್ ಪಡೆದು ಬಂದಿದ್ದೇನೆ. ಔಷಧಿ ತಯಾರು ಮಾಡಿ ಅವರಿಗೆ ಉಚಿತವಾಗಿ ಪೂರೈಕೆ ಮಾಡುವ ಕರಾರು ಪತ್ರಕ್ಕೂ ಸಹಿ ಮಾಡಿ ಬಂದಿದ್ದೇನೆ. ಮೆಡಿಕಲ್ ಮಾಫಿಯಾ ನನ್ನ ವಿರುದ್ಧ ತಿರುಗಿಬಿದ್ದರೂ ನಾನೇನು ಲೆಕ್ಕಿಸುವುದಿಲ್ಲ. ಜೊತೆಗೆ ಕಡಿಮೆ ಬೆಲೆಗೆ ನಮ್ಮ ಕಂಪನಿಯ ಮೂಲಕ ಜಾಗತಿಕ ಮಾರುಕಟ್ಟೆಗೆ ಬಿಡಲು ಯೋಚಿಸುತ್ತಿದ್ದೇವೆ. ಆ ಮೂಲಕ ಮೆಡಿಕಲ್ ಮಾಫಿಯಾವನ್ನು ಬ್ರೇಕ್ ಮಾಡಿ ಜಗತ್ತಿಗೆ ತಿಳಿಸಬೇಂದಿದ್ದೇನೆ. ಐಯಾಮ್ ಹ್ಯಾಪಿ ನೌ...' ಅವನ ಮಾತುಗಳಲ್ಲಿ ಖುಷಿಯೊಂದಿಗೆ ಆತ್ಮವಿಶ್ವಾಸ ಕೂಡಾ ತುಂಬಿ ಕೊಂಡಿತ್ತು. 'ಸೋ ನೈಸ್, ಕಂಗ್ರಾಟ್ಸ್' ಎಂದಿದ್ದಳು. 'ಅಲ್ಲಿಂದ ಜಸ್ಟ್ ನೂರಾಮೂವತ್ತು ಕಿಲೋಮೀಟರ್ ದೂರದಲ್ಲಿರುವ ನಯಾಗರಕ್ಕೂ ಹೋಗಿ ಬಂದೆ. ಎಂಥ ರುದ್ರರಮಣೀಯ ಜಲಪಾತ/ ಅಲ್ಲಿ ನಿಮ್ಮ ನೆನಪಾಯಿತು. ನಿಮ್ಮನ್ನಲ್ಲಿ ತುಂಬಾ ಮಿಸ್ ಮಾಡಿಕೊಂಡೆ ಅನ್ನಿಸ್ತು' ಎಂದವನ ಮಾತುಗಳಲ್ಲಿ ಲವಲವಿಕೆಯಿತ್ತು. ಅವಳು ಮಾತ್ರ ಕೂಡಲೇ ಭಯ, ಗಾಬರಿ ತುಂಬಿಕೊಂಡು 'ಓ ಮೈ ಗಾಡ್, ಓ ಮೈ ಗಾಡ್' ಎನ್ನುತ್ತಾ ಬೆವರಿದವಳು ಸಣ್ಣಗೆ ಕಂಪಿಸಿದ್ದಳು. 'ಏನಾಯ್ತು?' ತಕ್ಷಣ ಕೇಳಿದ್ದ. 'ಏನಿಲ್ಲ, ನಾನೂ ನಯಾಗರವನ್ನು ನೋಡಿದ್ದೇನೆ. ಅದರ ಅಗಾಧತೆ ನೆನಪಿಗೆ ಬಂದು ಭಯಪಟ್ಟೆ. ಈ ವಿಮಾನ ಸೀದಾ ಹೋಗಿ ನಯಾಗರದಲ್ಲಿ ಬಿದ್ದರೆ ಎಷ್ಟು ಚೆನ್ನಾಗಿರುತ್ತದೆ ಎಂದು ಅನ್ನಿಸತೊಡಗಿದೆ ನನಗೀಗ' ಎಂದಿದ್ದಳು ಅಸಂಗತವಾಗಿ. 'ಓಹ್ ಇದೀಗ ನೀವೂ ಸಾವಿನ ಮಾತನ್ನು ಆಡುತ್ತಿರುವಿರಲ್ಲ. ನನಗೀಗ ಬದುಕಿನ ಬಗ್ಗೆ ಮಮತೆ ಹುಟ್ಟಿದೆ. ನನ್ನಲ್ಲಿನ ಈ ಬದಲಾವಣೆ ನಿಮ್ಮಿಂದಾಗಿಯೇ ಅನ್ನಿಸುತ್ತಿದೆ ನನಗೆ. ಬರುವ ಭಾನುವಾರ ನನ್ನ ಹುಟ್ಟಿದ ದಿನ. ನಲವತ್ತು ವರ್ಷ ಕಂಪ್ಲೀಟ್ ಆಗ್ತಿದೆ. ಹಿಂದೆ ಯಾವಾಗಲೂ ನಾನು ಜನ್ಮದಿನವನ್ನು ಆಚರಿಸಿಕೊಂಡವನಲ್ಲ. ನೀವು ಬರುವಿರಾದರೆ ಬೆಂಗಳೂರಿನ ವೆಸ್ಟ್ ಎಂಡ್ ಹೋಟೆಲಿನಲ್ಲಿ ನಾವಿಬ್ಬರೇ ಮಾತನಾಡುತ್ತಾ ಊಟ ಮಾಡಬಹುದು. ಮತ್ತು ನೀವು ವೆಸ್ಟ್ ಎಂಡ್‌ನಲ್ಲಿಯೇ